ಕೂಡ ನಾನು ಕಮ ತೆಗೆದುಕೊಳ್ಳುತ್ತೇನೆ ಇನ್ನು ಹಾಸನಕ್ಕೆ ಸಂಬಂಧಪಟ್ಟ ಹಾಗೆ ಬಾಕಿ ಏನಾಗಿದೆ ಎಂದು ಕೇಳಿದರು, ಅದು reject ಆಗಿದೆ ಇದರಲ್ಲಿ ಕಾಲಂ ಏನಿದೆ, ಅದರಲ್ಲಿ ಮೊದಲನೆಯದು reported, ಎರಡನೆಯದು compensation paid, ಮೂರನೆಯದು enquiry pending ಆಗಿರುವುದು, ಉಳಿದಿರುವುದು reject ಆಗಿರುವುದು ತಮಗೆ ಗೊತ್ತಿದೆ ಹಿಂದೆ ಇದಕ್ಕೆ ಒಂದು norms ಮಾಡಿ, ಇದು ಯಾವ norms ನಲ್ಲಿ fit ಆಗುತ್ತದೆಂದು ನೋಡುವುದಕ್ಕೆ ಎಂದು AC ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದೆ ಬಾಕಿ ಕೇಸ್‌ಗಳು reject ಆಗಿದೆ Prime Minister package ನಲ್ಲಿ interest waiver ಬಗ್ಗೆ ಕೇಳಿದಿರಿ, ಈಗಾಗಲೇ ಇವತ್ತು ಇಡೀ ಆರು ಜಿಲ್ಲೆಗಳಲ್ಲಿ 209 ಕೋಟಿ ರೂಪಾಯಿ interest package ನಲ್ಲಿ ಕೊಡಬೇಕೆಂದು ತೀರ್ಮಾನವಾಗಿದೆ ಹಲವಾರು cabinet sub committee ಮೀಟಿಂಗ್ ಆಗಿದೆ ಯಾವುದೇ ಕಾರಣಕ್ಕೂ ಕೇಂದ ಸರ್ಕಾರದಿಂದ Prime Minister package ನಲ್ಲಿ ಬಂದಂತಹ ಹಣವನ್ನು ಕೊಡುವುದಕ್ಕೆ ವಿಳಂಬ ಮಾಡುವುದಿಲ್ಲ ಪತಿ ಜಿಲ್ಲೆಗೆ 50 ಲಕ್ಷ ರೂಪಾಯಿ Prime Minister relief fund ನಲ್ಲಿ ಹೋಗಿದೆ ಅದರ ಕೆಲಸ ಕಾರ್ಯಗಳು ನಡೆಯುತ್ತಿವೆ ಇನ್ನು ಬಾಕಿ ಹಣ ಬರುತ್ತಿದೆ ನಾವು plan of action ರೂಪಿಸಿಕೊಂಡು ಕೆಲಸ ಮಾಡುತ್ತಿದ್ದೇವೆ

ಅಧ್ಯಕ್ಷರು ಈಗ ಸಿದ್ದು ಸವದಿಯವರು ಪಶ್ನೆ ಕೇಳಿ

ಶೀ ಬಿ ಶಿವರಾಂ 50 ಲಕ್ಷ ರೂಪಾಯಿ ಪಿಡುಗಡೆ ಮಾಡಿರುವುದು ಖಾಸಗಿ ತೇವಾದೇವಿ ಮತ್ತು ಇತರೆ ವೆಚ್ಚಕ್ಕೆ ಆದರೆ ಬ್ಯಾಂಕಿನ ಬಗ್ಗೆ ನಾನು specific ಆಗಿ ಕೇಳುತ್ತಿದ್ದೇನೆ ಆ ಬ್ಯಾಂಕಿಗೆ direction ಹೋಗಬೇಕು

ಅಧ್ಯಕ್ಷರು ಪ್ರಶ್ನೆ ಮುಗಿಸಿದ್ದೇನೆ ಎಂದು ಹೇಳಿದರೂ ಕೂಡ ನೀವು ಉತ್ತರ ಹೇಳುತ್ತಿದ್ದೀರಿ ಮಂತಿಗಳಿಂದಲೇ ಅರ್ಧ ನಿಧಾನವಾಗುವುದು

ಕಬ್ಬು ಬೆಳೆಗಾರರಿಗೆ ಯೋಗ್ಯ ಬೆಲೆ ನೀಡುವುದು

47(235) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಬ್ಬು ಬೆಳೆಯುವ ರೈತರು ಕಷ್ಟದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಕಬ್ಬು ಬೆಳೆಗಾರರ ಸಮಸ್ಯೆಗಳಿಂದ ಸಮಯಕ್ಕೆ ಸರಿಯಾಗಿ ಕಟಾವು, ನೀರಿನ ತೊಂದರೆ ಮತ್ತು ಉಣ್ಣೆ ರೋಗ ಇವುಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದೇ ,

ಇ) ಬೆಳೆಗಾರರಿಗೆ ಯೋಗ್ಯ ಬೆಲೆ ಪಡೆಯುವಲ್ಲಿ ತೊಂದರೆ ಕೊಡುತ್ತಿರುವ ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ ,

ಈ) ಈ ಕಾರ್ಖಾನೆ ಮತ್ತು ರೈತರ ನಡುವೆ ಇರುವ ನಿಯಮಾವಳಿಗಳಾವುವು , ಹಾಗಿದ್ದಲ್ಲಿ ನಿಯಮಗಳನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ ,

ಉ) ರೈತರಿಗೆ ಸರಿಯಾಗಿ ಬಿಲ್ಲಿನ ಹಣ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಊ) ನಿಯಮ ಬಾಹಿರವಾಗಿ ಕಬ್ಬಿನ ಕಟಾವಿಗೆ ಆದೇಶಿಸುವುದು ಹಾಗೂ ಶೇ 15 ರಿಂದ ಶೇ 25 ಸೂಟ ಬಿಡುವಂತೆ ರೈತರಿಗೆ ಬಲಾತ್ಕಾರ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಋ) ಬಂದಿದ್ದಲ್ಲಿ, ಬಿಲ್ಲಿನ ಹಣ ಪಾವತಿಗಾಗಿ ಹಾಗೂ ನಿಯಮ ಬಾಹಿರ ಕ್ರಮವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಹೌದು

ಆ) ಪ್ರತಿಯೊಂದು ಕಾರ್ಖಾನೆಯಲ್ಲೂ ಕಬ್ಬು ಬೆಳೆ ಹಾಗೂ ಸರಬರಾಜು ನಿರ್ವಹಣೆಗಾಗಿ ಒಂದು ಪ್ರತ್ಯೇಕ ವಿಭಾಗವನ್ನು ಅಳವಡಿಸಿಕೊಂಡಿರುತ್ತವೆ ಈ ವಿಭಾಗವು ಕಾರ್ಖಾನೆಯ ಸಾಮರ್ಥ್ಯಕ್ಕನುಗುಣವಾಗಿ ಕಬ್ಬಿನ ನಿರಂತರ ಸರಬರಾಜು ಮಾಡಲು ವೇಳಾ ಪಟ್ಟಿ ರಚಿಸಿ, ಆ ಪ್ರಕಾರ ಸಮಯಕ್ಕೆ ಸರಿಯಾಗಿ ಕಟಾವು ಮಾಡಲು ಕ್ರಮವಹಿಸುತ್ತಿವೆ ರಾಜ್ಯದಲ್ಲಿ ಸಧ್ಯಕ್ಕೆ ಉಣ್ಣೆ ರೋಗವನ್ನು ನಿಯಂತ್ರಿಸಲಾಗಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲ

ಇ) ಕಬ್ಬು ಬೆಳೆಗಾರರಿಗೆ ಯೋಗ್ಯ ಬೆಲೆ ದೊರಕಿಸಿ ಕೊಡುವಲ್ಲಿ ರಾಜ್ಯ ಸರ್ಕಾರವು ನಿರಂತರ ಕ್ರಮ ವಹಿಸುತ್ತಿವೆ ಕಬ್ಬಿನ ಶಾಸನಬದ್ಧ ಕನಿಷ್ಠ ಬೆಲೆಯನ್ನು ಕೇಂದ್ರ ಸರ್ಕಾರವು ಹಲವು ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಿಗಧಿಗೊಳಿಸುತ್ತದೆ ಆ ಪ್ರಕಾರ ಕೇಂದ್ರ ಸರ್ಕಾರವು ನಿಗಧಿಪಡಿಸಿದ ಶಾಸನಬದ್ಧ ಕನಿಷ್ಠ ಬೆಲೆಗಿಂತ ಕಡಿಮೆ ಇಲ್ಲದಂತೆ ಖಾತ್ರಿಯಾಗಿ ಪಾವತಿಸಲು ಕ್ರಮವಹಿಸಲಾಗುತ್ತಿದೆ ಮುಂದುವರೆದು ಕಬ್ಬು (ನಿಯಂತ್ರಣ) ಕಾಯ್ದೆ 1966ರ ಕಲಂ 5(ಎ) ರನ್ವಯ ಕಾರ್ಖಾನೆಯು ಹೆಚ್ಚುವರಿಯಾಗಿ ಕಬ್ಬು ಬೆಲೆ ಪಾವತಿಸಲು ಬಂದಿಲ್ಲಿ ಅದನ್ನು ಪಾವತಿಸಲು ಕ್ರಮವಹಿಸಲಾಗುವುದು

ಈ) ಕಾರ್ಖಾನೆ ಮತ್ತು ರೈತರು ಕಬ್ಬು ದರ ನಿಗಧಿ ಮತ್ತು ಕಬ್ಬು ಸರಬರಾಜಿಗಾಗಿ ಪರಸ್ಪರ ಒಪ್ಪಂದ ಮಾಡಿಕೊಂಡು ಆ ಪ್ರಕಾರ ನಡೆದುಕೊಳ್ಳುತ್ತಿವೆ ಹೌದು

ಉ) ರೈತರು ಮತ್ತು ಕಾರ್ಖಾನೆಗಳ ಪರಸ್ಪರ ಒಪ್ಪಂದದ ಅನ್ವಯದ ಕಬ್ಬಿನ ಬಿಲ್ಲಿನ ಹಣ ಪಾವತಿಯಾಗುತ್ತಿರುತ್ತವೆ

ಊ) ಇಲ್ಲ

ಋ) ಉದ್ಭವಿಸುವುದಿಲ್ಲ

ಶೀ ಸಿದ್ದು ಸವದಿ ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ತಮಗೆ ತಿಳಿದ ಹಾಗೆ ಕಬ್ಬಿನ ಕಟಾವನ್ನು ಯಾವುದೇ ಕಾರ್ಖಾನೆಯವರು ಮಾಡುತ್ತಿಲ್ಲ ಸುಮಾರು ಎರಡು ವರ್ಷ ಕಳೆದರೂ ಸಹ ಯಾವುದೋ ಒಂದು ನೆಪ ಹೇಳಿ ನೂರಕ್ಕೆ 15 ರಿಂದ 25 ಪರ್ಸೆಂಟ್‌ನವರೆಗೆ cut ಮಾಡಿ ರೈತರು ಹಾನಿ ಅನುಭವಿಸುವಂತಹ ಪರಿಸ್ಥಿತಿ ಬಂದೊದಗಿದೆ ಸರ್ಕಾರ ರೈತರ ಸಹಾಯಕ್ಕೆ ಬಂದು ಅವರಿಗೆ ಪರಿಹಾರ ಒದಗಿಸಿಕೊಡಬೇಕೆಂದು ಮಾನ್ಯ ಸಕ್ಕರೆ ಸಚಿವರಿಗೆ ಪರಿಹಾರವನ್ನು ಕೇಳಬಯಸುತ್ತೇನೆ

ಶೀ ಎಸ್ ಎ ರವೀಂದನಾಥ್ ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ ನನ್ನ ಗಮನಕ್ಕೆ ಬಂದರೆ ಯಾವ ಸಕ್ಕರೆ ಕಂಪನಿಯವರು ಆ ರೀತಿ 15 ರಿಂದ 25 ಪರ್ಸಂಟ್ cut ಮಾಡುತ್ತಿದ್ದಾರೆ, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ

ಶೀ ಸಿದ್ದು ಸವದಿ IC ಅಗರ ಜಾತಿ ಕಬ್ಬಿಗೆ 15 ರಿಂದ 25 ಪರ್ಸೆಂಟ್‌ವರೆಗೆ ಕಟಾವು ಮಾಡಿದ್ದಾರೆ, ಅದರ ಬಗ್ಗೆ ತಾವು ಮಾಹಿತಿಯನ್ನು ತರಿಸಿಕೊಳ್ಳಬೇಕು

ಅಧ್ಯಕ್ಷರು ನಿಖರವಾಗಿ ತಾವು ಯಾರ ಮೇಲೆ ದೂರು ಇದೆ ಎಂದು ಮಾಹಿತಿ ಕೊಡಿ ಅವರಿಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ ಅವರು enquiry ಮಾಡುವುದಕ್ಕೆ ready ಇದ್ದಾರಲ್ಲ

ಶೀ ಸಿದ್ದು ಸವದಿ ಸಮೀರ್‌ವಾಡಿ factory, ಪಭುಲಿಂಗೇಶ್ವರ factory ಮತ್ತು ಜಮಖಂಡಿ sugar factory ಈ ರೀತಿ ಎಲ್ಲಾ factories 8011 ಕಬ್ಬಿಗೆ 15 ರಿಂದ 25 ಪರ್ಸೆಂಟ್ ಕಬ್ಬು ಕಟಾವ್ ಮಾಡಿ ಕಬ್ಬನ್ನು ಸಾಗಾಣಿಕೆಗೆ order ಕೊಡುತ್ತಿದ್ದಾರೆ ಅದರ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ

ಶೀ ಎಸ್ ಎ ರವೀಂದನಾಥ್ ತಾವು ಬರೆದುಕೊಟ್ಟರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತಹ ಪಯತ್ನ ಮಾಡುತ್ತೇನೆ

ರಾಜ್ಯದ ರೈತರಿಗೆ ಬೆಳೆವಿಮೆ ವಿತರಿಸುವ ಬಗ್ಗೆ

49(249) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದ ರೈತರಿಗೆ ಕಳೆದ ಒಂದು ವರ್ಷದಿಂದ (ದಿನಾಂಕ 15 01 2007 ರವರೆಗೆ) ಎಷ್ಟು ಮೊತ್ತದ ಬೆಳೆ ವಿಮೆಯನ್ನು ವಿತರಣೆ ಮಾಡಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) ,